# ಸಂಕೇತಿ ವಾರ್ತಾ

ಬೆಟ್ಟದಪುರ ಸಂಕೇತಿ ಸಂಘದ ಮಾಸಪತ್ರಿಕೆ

ಶ್ರೀ ತಾರಣ ಸಂ॥ ಚೈತ್ರ ಮಾಸ | ಸಂಪುಟ - ೧೯

ಮಾರ್ಚ್ - ೨೦೦೪ | ಸಂಚಿಕೆ - ೦೩


# O King! Listen to me

## The power of the Lord's Names

What will you wager that many teachers and students of our now-beleaguered IITs have grown up listening to the Vishnu Sahasranamam ? The thousand Names of the Lord, expecially as sung by M.S. Subbalakshmi, are a key to faith in many Indian homes. Their resonance can strengthen the resolve of the most non-confrontational person in taking a stand for 'dharma'.

The Vishnu Sahasranama has an exalted status in spiritual literature, perhaps because the Vishnu Puran has decreed that singing the praise of Keshava (Maha Vishnu) has the same merit in Kali Yuga as meditation had in Satya Yuga, puja in Dwapara Yuga and yagna (sacrifice) in Treta Yuga. Centuries later, Chaitanya Mahaprabhu endorsed Naamkirtan as the only route to salvation in this epoch, as did Guru Nanak Dev. The Koran Sharief takes a similar path, focused on the Ninety Nine Beautiful Names (Al Asma al Husna) of Allah, believed to be of divine origin (taufiqi).

The Vishnu Sahasranama is also reversed as intuited through Divine Grace. It occurs in the Anushasanika Parva of





the Mahabharata. Bhishma lies on his chosen bed of arrows waiting to give up his breath at the auspicious time of Uttarayan (January 13-14). Lord Krishna tells Yudhishtira to sit by the grandsire and learn "all dharmas". At the end, the Pandava prince, now king, asks six questions, of which two are : "Who is the Supreme Lord?" and "How may a person free himself of wordly ties?" Bhishma answers : "Vishnu" to the first and to the second, "Singing His praise will carry man across the ocean of existence". This is the prologue to the Vishnu Sahasranama, followed by the Thousand Names sung by past saints, which Bhishma elaborates. Then comes the 'phalashruti' or epilogue of merits so gained.

Many commentaries exist on the Names, but I love this story about Adi Shankara. Wanting to write on the Lalita Sahasranamam, Shankara asks his disciple to fetch the text. But the shishya hands him the Vishnu Sahasranamam instead. Shankara sends him back for the right one, but the same thing happens. When rebuked, the shishya explains that each time he was directed by a dazzling feminine form to pick up the Vishnu text. Shankara reads this a signal from Adi Parashakti, the Supreme Goddess herself, to comment first on the Vishnu Sahasranamam. We still hear the Grandsire's thrilling words across the aeons : Tasya lokapradhanasya / jagannathasya bhupathe / vishnor - namasahasram me / shrunu papa bhayaapaham. - 'O King! Listen to me give forth the thousand Names of Vishnu, the Lord of the Universe, the Greatest One : these Names take away sin and fear'.

# ಅಧ್ಯಕ್ಷ ನುಡಿ



ಆತ್ಮೀಯ ಬಾಂಧವರಿಗೆಲ್ಲ ಶ್ರೀ ತಾರಣ ಸಂವತ್ಸರದ ಹಾಗೂ ಯುಗಾದಿಯ ಹಾರ್ದಿಕ ಶುಭಾಶಯಗಳು. ನಾವು ಆಚರಿಸುವ ಅನೇಕ ಹಬ್ಬಗಳಲ್ಲಿ ಯುಗಾದಿಯ ಆಚರಣೆ ವಿಶಿಷ್ಟವಾದುದು. ಯುಗದ ಆದಿಯನ್ನು ಸೂಚಿಸುವ ಅಂದರೆ ಹೊಸವರ್ಷಕ್ಕೆ ಕಾಲಿಡುವ ಸಂದರ್ಭದಲ್ಲಿ ಬೇವು-ಬೆಲ್ಲದ ಸೇವನೆ ತುಂಬ ಅರ್ಥಪೂರ್ಣ. ಬರುವ ದಿನಗಳನ್ನು ಧೈರ್ಯದಿಂದ ಎದುರಿಸುತ್ತಲೇ, ಕಷ್ಟ-ಸುಖಗಳನ್ನು ಒಂದೇ ರೀತಿ ಸ್ವೀಕರಿಸುವ ಮನದ ಸ್ಥಿತಿಯನ್ನೂ ಸೂಚಿಸುವ ಯುಗಾದಿ ನಮ್ಮೆಲ್ಲರಿಗೂ ಹೆಚ್ಚಿನ ಒಳಿತನ್ನೇ ತರಲಿ ಎಂದೂ ಆಶಿಸೋಣ.

ಕಳೆದ ತಿಂಗಳು ಎರಡು ಅಪರೂಪದ ಕಾರ್ಯಕ್ರಮಗಳು ಒಂದೇ ದಿನ ಎರಡು ಸ್ಥಳಗಳಲ್ಲಿ ನಡೆದಿವೆ. ಹೌದು, ತ್ಯಾಗರಾಜ-ಪುರಂದರ ಆರಾಧನಾ ಮಹೋತ್ಸವವು ಮೈಸೂರು ಮತ್ತು ಬೆಂಗಳೂರಿನಲ್ಲಿ ಆಯಾ ಶಾಖಾ ಸಂಘಗಳಿಂದ ಆಯೋಜಿಸಲ್ಪಟ್ಟು ಬಾಂಧವರ ಅತ್ಯುತ್ತಮ ಸಹಕಾರ ಮತ್ತು ಭಾಗವಹಿಸುವಿಕೆಗಳಿಂದ ಅತ್ಯಂತ ಯಶಸ್ವಿಯಾಗಿವೆ. ಸಂಗೀತದ ಸಂತ ದಿಗ್ಗಜರ ಆರಾಧನೆಯಲ್ಲಿ ಪಾಲ್ಗೊಂಡ ಎಲ್ಲ ಬಂಧುಗಳಿಗೂ ಅಭಿನಂದನೆಗಳು. ಸಂಘವು ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನೀವೆಲ್ಲ ನಮ್ಮಲ್ಲಿ ಉತ್ಸಾಹ ತುಂಬಿದ್ದೀರಿ.

ಬೆಂಗಳೂರಿನಲ್ಲಿ ಕಲ್ಯಾಣಮಂಟಪ ಅಥವಾ ವೃದ್ಧಾಶ್ರಮವೊಂದನ್ನು ನಿರ್ಮಿಸುವ ನಮ್ಮ ಆಲೋಚನೆಗೆ ನಿಮ್ಮೆಲ್ಲರ ಹೆಚ್ಚಿನ ನೆರವು ಅಗತ್ಯ. ಈ ಹಿಂದೆಯೇ ತಿಳಿಸಿರುವಂತೆ ಬೆಂಗಳೂರಿನ ವಾಜಿರಹಳ್ಳಿಯ ಬಿ.ಡಿ.ಎ. ಇಂದ ಅಂಗೀಕೃತವಾದ ನಿವೇಶನದಲ್ಲಿ ನಿಮ್ಮೆಲ್ಲರ ಅನಿಸಿಕೆ, ಅಭಿಪ್ರಾಯಗಳನ್ನು ಪರಿಗಣಿಸಿ ಸೂಕ್ತ ಕಟ್ಟಡದ ನಿರ್ಮಾಣವನ್ನು ಪ್ರಾರಂಭಿಸಬೇಕೆಂದಿದ್ದೇವೆ. ದಯಮಾಡಿ ಬಾಂಧವರು ತಮ್ಮ ಪ್ರತಿಕ್ರಿಯೆಯನ್ನು ಸಂಘಕ್ಕೆ ತಿಳಿಸಬೇಕಾಗಿ ವಿನಂತಿ.

– ಎಂ ನರಸಿಂಹನ್





# ಕಾರ್ಯದರ್ಶಿ ಕಾಲಂ



ಸಹೃದಯ ಸದಸ್ಯರಿಗೆಲ್ಲ ತಿಳಿದಿರುವಂತೆ ನಿಮ್ಮ ಮೆಚ್ಚಿನ 'ವಾರ್ತಾ' ಮತ್ತಷ್ಟು ದಷ್ಟ-ಪುಷ್ಟವಾಗಬೇಕಾಗಿದೆ. ಈ ನಿಟ್ಟಿನಲ್ಲಿ 'ವಾರ್ತಾ ನಿಧಿ' ಗಾಗಿ ಮಹಾ ಪೋಷಕರು ಮತ್ತು ಪೋಷಕರು ಎಂಬ ಎರಡು ವರ್ಗಗಳಡಿ ಉದಾರ ಕೊಡುಗೆಗಳನ್ನು ಸಂಘವು ನಿರೀಕ್ಷಿಸುತ್ತಿದ್ದು, ಆತ್ಮೀಯ ಬಾಂಧವರು ಕೊಡುಗೆಗಳನ್ನು ನೀಡಲು ಆರಂಭಿಸಿದ್ದಾರೆ. ಇದರ ಜೊತೆಗೆ ಅಂಚೆ ಇಲಾಖೆಯಿಂದ ಒಂದು ಆದೇಶ ಬಂದಿದ್ದು, 'ವಾರ್ತಾ' ಸಂಚಿಕೆಗಳನ್ನು ಉಚಿತವಾಗಿ ಸದಸ್ಯರಿಗೆ ಕಳುಹಿಸಿದ ಪಕ್ಷದಲ್ಲಿ ಇಲಾಖೆಯಿಂದ ನಮಗೆ ದೊರಕುತ್ತಿರುವ ಅಂಚೆ ಶುಲ್ಕದ ವಿಶೇಷ ರಿಯಾಯಿತಿಯನ್ನು ಹಿಂತೆಗೆದುಕೊಳ್ಳುವುದಾಗಿ ಸೂಚಿಸಲಾಗಿದೆ. ಇದರ ಬಗ್ಗೆ ನಾವು ಸ್ಪಷ್ಟೀಕರಣ ಕೇಳಿದ್ದೇವೆ. ಆದಾಗ್ಯೂ 'ವಾರ್ತಾ' ತನ್ನನ್ನು ಸದೃಢಗೊಳಿಸಲು ಮತ್ತಷ್ಟು ಪ್ರಯತ್ನ ಮಾಡಬೇಕಾಗಿದೆ ಎಂಬುದು ಸ್ಪಷ್ಟ, ಆದ್ದರಿಂದ ಮಾನ್ಯ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಮಹಾ ಪೋಷಕರಾಗಿ/ ಪೋಷಕರಾಗಿ 'ವಾರ್ತಾ' ವನ್ನು ಬೆಳೆಸಿಕೊಂಡು ಹೋಗಬೇಕೆಂದು ಪ್ರಾರ್ಥಿಸುತ್ತೇನೆ.

ರಾಜ್ಯದ, ದೇಶದ ಅಷ್ಟೇ ಏಕೆ ದೇಶದ ಹೊರಗೂ ಅನೇಕ ಸ್ಥಳಗಳಲ್ಲಿ ನಾನಾ ಕಾರಣಗಳಿಂದ ವಾಸ್ತವ್ಯ ಹೂಡಿರುವ ನಮ್ಮ ಬಾಂಧವರನ್ನೆಲ್ಲಾ ಅಪರೂಪಕ್ಕಾದರೂ ಒಮ್ಮೆ ಒಂದೆಡೆ ಸೇರಿಸಿ ವಿಚಾರ ವಿನಿಮಯಕ್ಕೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಅಖಿಲ ಭಾರತ ಸಂಕೇತಿ ಸಮ್ಮೇಳನವೊಂದನ್ನು ನಡೆಸುವ ಯೋಜನೆ ನಡೆಯುತ್ತಿದೆ. ಈ ನಿಟ್ಟಿನಲ್ಲಿ ತಮ್ಮೆಲ್ಲರ ಸಲಹೆ, ಅಭಿಪ್ರಾಯಗಳನ್ನು ಕೋರಲಾಗಿದೆ.

– ಆರ್. ಎಸ್. ಭಾಸ್ಕರ ಅವಧಾನಿ

# ಶುಭ ಸಮಾಚಾರಗಳು

## ಗೃಹಪ್ರವೇಶ

| ತಾರೀಖು | ಹೆಸರು |
|---|---|
| 23.02.04 ಮೈಸೂರು | ಶ್ರೀಮತಿ ನಾಗರತ್ನ ಮತ್ತು ಶ್ರೀ ಎಂ.ವಿ. ಸುಬ್ರಹ್ಮಣ್ಯ |
| 25.02.04 ಬೆಂಗಳೂರು | ಶ್ರೀಮತಿ ನಿರ್ಮಲಾ ಗದ್ವಾಲ್ ಮತ್ತು ಹೆಚ್. ಕೆ. ನಾಗೇಂದ್ರ |
| 25.02.04 ಬೆಂಗಳೂರು | ಶ್ರೀಮತಿ ವೀಣಾ ಮತ್ತು ಶ್ರೀ ಎಸ್. ಎ. ರಮೇಶ್ (ಶ್ರೀಮತಿ ಭಾಗ್ಯ ಮತ್ತು ಎಸ್. ಎನ್. ಅನಂತರಾಮನ್ ಅವರ ಪುತ್ರ) |
| 04.03.04 ಬೆಂಗಳೂರು | ಶ್ರೀಮತಿ ರಶ್ಮಿರೇಖಾ ಮತ್ತು ಪಿ.ವಿ. ಪಟ್ಟಾಭಿ (ಶ್ರೀಮತಿ ಗೀತಾಮಣಿ ಮತ್ತು ಶ್ರೀ ಎಸ್. ಎನ್. ಶ್ರೀನಿವಾಸ ಮೂರ್ತಿ ಅವರ ಪುತ್ರಿ) |
| 08.03.04 ಬೆಂಗಳೂರು | ಶ್ರೀಮತಿ ಗಾಯತ್ರಿ ಮತ್ತು ಶ್ರೀ ಎಸ್.ಆರ್ ಶ್ರೀನಿವಾಸ ಮೂರ್ತಿ (ದಿ|| ಸಾಲಿಗ್ರಾಮದ ಎಸ್. ರಂಗಸ್ವಾಮಿಯವರ ಪುತ್ರ) |

## ಶಿವರಾತ್ರಿ ಮಹೋತ್ಸವ

| | |
|---|---|
| 19.02.04 ಬೆಟ್ಟದಪುರ | ಬೇಗಾರಿ ತಿಮ್ಮಪ್ಪಯ್ಯ ಛಾರಿಟಬಲ್ ಟ್ರಸ್ಟ್ (ರಿ) ವತಿಯಿಂದ ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ಈ ವರ್ಷವೂ ಸಹ ಪೂಜಾದಿ ಕಾರ್ಯಕ್ರಮಗಳು, ಅನ್ನಸಂತರ್ಪಣೆ ನಡೆಯಿತು. |

## ರಥೋತ್ಸವ

| | |
|---|---|
| 18.02.04 ಹನಸೋಗೆ | ಮಹಾಶಿವರಾತ್ರಿ ಪ್ರಯುಕ್ತ ಹನಸೋಗೆ ಗ್ರಾಮಾಭಿವೃದ್ಧಿ ಟ್ರಸ್ಟ್ (ರಿ) ಆಶ್ರಯದಲ್ಲಿ ಶ್ರೀ ಪ್ರಸನ್ನ ಪಾರ್ವತಿ ಸಮೇತ ಶ್ರೀ ಅವಿ ಮುಕ್ತೇಶ್ವರ ಸ್ವಾಮಿಗೆ ವಿಶೇಷ ಪೂಜೆಯನ್ನು ಏರ್ಪಡಿಸಿತ್ತು. |





## ಉಪನಯನ

| ತಾರೀಖು | ವಟುವಿನ ಹೆಸರು |
|---|---|
| 09.02.04 ಮೈಸೂರು | ಎಸ್. ಭಾರ್ಗವ (ಸುಶ್ರುತಾ) (ಬಿ.ಎಸ್. ಸತ್ಯನಾರಾಯಣ ಅವರ ಪುತ್ರ) |
| 04.02.04 ತಿರುಪತಿ | ಶಿವತೇಜಸ್ (ಶ್ರೀಮತಿ ಶೈಲಜಾ ಮತ್ತು ಶ್ರೀ ರಘುಪ್ರಸಾದ್ ಅವರ ಪುತ್ರ) (ಶ್ರೀಮತಿ ಕಮಲಾ ಕೃಷ್ಣಸ್ವಾಮಿ ಅವರ ಮೊಮ್ಮಗ) |
| 08.03.04 ತಿರುಪತಿ | ಆರ್. ಎಸ್. ಶಮಂತ್ (ಶ್ರೀಮತಿ ರುಕ್ಮಿಣಿ ಮತ್ತು ಶ್ರೀ ಆರ್. ಎಸ್. ಶ್ರೀನಿವಾಸ್ ಅವರ ಪುತ್ರ) (ಶ್ರೀಮತಿ ವಿಮಲಾ ಮತ್ತು ಶ್ರೀ ಆರ್.ವೈ. ಶ್ರೀನಿವಾಸ ಅವರ ಮೊಮ್ಮಗ) |

## ಶ್ರದ್ಧಾಂಜಲಿ

| | |
|---|---|
| 13.02.04 ಬೆಂಗಳೂರು | ಶ್ರೀಮತಿ ಸಾವಿತ್ರಮ್ಮ, 61 ವರ್ಷ, ವಾಧೂಲಸ ಗೋತ್ರ. (ಕೊಯಮತ್ತೂರಿನ ದಿ|| ಬಿ.ಆರ್. ಸುಬ್ರಹ್ಮಣ್ಯ ಅವರ ಪತ್ನಿ) |
| 16.02.04 ಮೈಸೂರು | ಶ್ರೀ ಆರ್. ಜಿ. ಶಾಮಣ್ಣ 81 ವರ್ಷ, ಭಾರದ್ವಾಜ ಗೋತ್ರ. (ಮಂಡ್ಯದ ನಿವಾಸಿಯಾಗಿದ್ದರು) |
| 12.03.04 ಬೆಂಗಳೂರು | ಶ್ರೀ ಹೆಚ್.ಬಿ. ಸುಬ್ರಹ್ಮಣ್ಯ, 67 ವರ್ಷ, ಕೌಶಿಕ ಗೋತ್ರ |

ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸಲು ಧೈರ್ಯ, ಸ್ಥೈರ್ಯಗಳನ್ನು ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

## ಫೆಬ್ರವರಿ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು :

**ಆಜೀವ ಸದಸ್ಯತ್ವ** **(100 ರೂ.ಗಳು)**

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ಚಿನ್ಮಯಿ ಬೆಟ್ಟದಪುರ್ | ಯು.ಎಸ್.ಎ. | 5585 | 1798 |
| ದಾಕ್ಷಾಯಿಣಿ ಕೃಷ್ಣಮೂರ್ತಿ | ಮಂಡ್ಯ | 5586 | 1799 |

| | | | |
|---|---|---|---|
| ಪ್ರಕಾಶ್ ಬೆಟ್ಟದಪುರ್ | ಯು.ಎಸ್.ಎ. | 5587 | 1800 |
| ಬಲ್ಜೀತ್ ಬೆಟ್ಟದಪುರ್ | ಯು.ಎಸ್.ಎ. | 5588 | 1801 |
| ಡಾ|| ಸುರೇಶ್ ಬಿ.ಕೆ. | ಮಂಡ್ಯ | 5589 | 1802 |
| ಅನುಪಮಾ. ವಿ. | ಮಂಡ್ಯ | 5590 | 1803 |
| ಅಖಿಲಾ ಬೆಟ್ಟದಪುರ್ | ಯು.ಎಸ್.ಎ. | 5591 | 1804 |
| ಅರ್ಚನಾ ಬೆಟ್ಟದಪುರ್ | ಯು.ಎಸ್.ಎ. | 5592 | 1805 |
| ಡಾ|| ಎನ್. ಕೆ. ರೂಪ | ಬೆಂಗಳೂರು | 5596 | 1806 |
| ಕೆ. ರವೀಂದ್ರನಾಥ | ಬೆಂಗಳೂರು | 6809 | 1792 |
| ನಾಗವೇಣಿ ರವೀಂದ್ರನಾಥ್ | ಬೆಂಗಳೂರು | 6810 | 1793 |
| ಜಗದೀಶ್ ಕೆ. | ಬೆಂಗಳೂರು | 6811 | 1794 |
| ಸವಿತಾ ಜಗದೀಶ್ | ಬೆಂಗಳೂರು | 6812 | 1795 |
| ಲಕ್ಷ್ಮೀ ಶಶಿಧರ್ | ಶಕ್ತಿನಗರ್ | 6446 | 1796 |
| ಶಶಿಧರ್. ಎಫ್.ಎಸ್. | ಶಕ್ತಿನಗರ್ | 6467 | 1797 |

## ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಆರ್. ಕೆ. ಮುರಳಿ | ಬೆಂಗಳೂರು | 5578 | 50.00 (ಗೃಹಪ್ರವೇಶ) |
| ಎಸ್.ಎ. ರಮೇಶ್ | ಬೆಂಗಳೂರು | 5597 | 100.00 (ಗೃಹಪ್ರವೇಶ) |
| ಬಿ.ಎಸ್. ಸತ್ಯನಾರಾಯಣ | ಮೈಸೂರು | 6468 | 25.00 (ಉಪನಯನ) |
| ಬಿ.ಜಿ. ಜಯರಾಮ್ | ಬೆಂಗಳೂರು | 6813 | 51.00 (ಮಗನ ಉಪನಯನ) |
| ಬಿ.ಆರ್. ಕೃಷ್ಣಪ್ರಸಾದ್ | ಬೆಂಗಳೂರು | 6901 | 101.00 (ಗೃಹಪ್ರವೇಶ) |

## ವಾರ್ತಾ / ಜಾಹೀರಾತು ಫಂಡ್ :

| | | | |
|---|---|---|---|
| ರೋಟಮ್ಯಾಕ್ ಇಂಡಿಯಾ | ಬೆಂಗಳೂರು | 5577 | 600.00 |
| ಮೇಘನ ಕಂಪ್ಯೂಟರ್ಸ್ | ಬೆಂಗಳೂರು | 5581 | 50.00 |
| ಶ್ರೀ ಭಾಸ್ಕರ್ ಇಂಡಸ್ಟ್ರೀಸ್ | ಬೆಂಗಳೂರು | 5594 | 600.00 |





## ಹಾಸ್ಟೆಲ್ ಅನ್ನದಾನಕ್ಕೆ ಬಂದ ಕೊಡುಗೆಗಳು :

| | | | |
|---|---|---|---|
| ಬಿ.ಕೆ. ಗೋವಿಂದರಾಜು | ಬೆಂಗಳೂರು | 5576 | 400.00 (ತಂದೆಯ ನೆನಪು) |
| ಬಿ.ಜಿ. ರಮೇಶ್ | ಬೆಂಗಳೂರು | 5579 | 400.00 (ತಂದೆಯ ನೆನಪು) |
| ಸುಕನ್ಯಾ ಪುರುಷೋತ್ತಮ್ | ಬೆಂಗಳೂರು | 5584 | 400.00 (ತಂದೆಯ ನೆನಪು) |
| ಬಿ.ಎಸ್. ಪೃಥ್ವಿರಾಜ್ | ಬೆಂಗಳೂರು | 5595 | 4,000.00 (ತಂದೆಯ ನೆನಪು) |
| ಆರ್.ಕೆ. ಚಂದ್ರಹಾಸ | ಬೆಂಗಳೂರು | 5598 | 400.00 (ತಂದೆಯ ನೆನಪು) |

## ವಿದ್ಯಾರ್ಥಿ ವೇತನ ನಿಧಿ :

| | | | |
|---|---|---|---|
| ಆರ್.ಎನ್. ಸುಂದರೇಶ | ಸೋಲಾಪುರ್ | 5575 | 4,000.00 (ಪಿತೃಗಳು |
| ಸೀತಾರಾಮ್ ರುದ್ರಪಟ್ಟಣ | ಯು.ಎಸ್.ಎ. | | ಪದ್ಮಾವತಿ ಮತ್ತು ಆರ್. |
| ಅಶೋಕ್ ರುದ್ರಪಟ್ಟಣ | ಯು.ಎಸ್.ಎ. | | ನರಸಿಂಹಯ್ಯ ನೆನಪಿನಲ್ಲಿ) |

## ವಾರ್ತಾ ಪೋಷಕರು / ಮಹಾ ಪೋಷಕರು :

| | | | |
|---|---|---|---|
| ಹೆಚ್.ವಿ. ಮಲ್ಲಿಕಾರ್ಜುನ | ಬೆಂಗಳೂರು | 5582 | 1,000.00 |
| ಎಸ್.ಆರ್. ರಾಮಚಂದ್ರ | ಬೆಂಗಳೂರು | 5583 | 1,000.00 |
| ಎಸ್.ಎನ್. ಅನಂತಶ್ರೀನಿವಾಸ | ಬೆಂಗಳೂರು | 5593 | 5,000.00 |

## ಫೆಬ್ರವರಿ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.02.04 ಬೆಂಗಳೂರು | ಅನಸೂಯರಾವ್ | ತಾಯಿ ಸಾವಿತ್ರಮ್ಮ |
| 5 ದಿವಸಗಳು ಮುಂಬಯಿ | ಆರ್.ಜಿ.ಎನ್. ಸ್ವಾಮಿ | |
| 02.02.04 ಯು.ಎಸ್.ಎ. | ಗಣೇಶ್ ಪ್ರಸಾದ್ ಮತ್ತು ಸಹೋದರರು | ತಂದೆ ಸುಬ್ಬನರಸಿಂಹಯ್ಯ |
| 03.02.04 ಬೆಂಗಳೂರು | ಆರ್.ಕೆ. ಶ್ರೀನಿವಾಸಮೂರ್ತಿ | ತಾಯಿ ಶಾರದಮ್ಮ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 05.02.04 ಮುಂಬಯಿ | ಕೀರ್ತಿ ಎಸ್. ರಾವ್ | ತಂದೆ ಪಿ. ಶಂಕರರಾವ್ |
| 06.02.04 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ಚಿಕ್ಕಮ್ಮ ಲಕ್ಷ್ಮಮ್ಮನವರ ಸಂತೋಷಕ್ಕಾಗಿ |
| 08.02.04 ಮುಂಬಯಿ | ಸುಬ್ಬಮ್ಮ ಶ್ರೀನಿವಾಸಯ್ಯ | ಪತಿ ಶ್ರೀನಿವಾಸಯ್ಯ |
| 09.02.04 ಬೆಂಗಳೂರು | ಬಿ.ವಿ. ವೆಂಕಟೇಶ್ | ತಂದೆ ವೆಂಕಟರಾಮಯ್ಯ |
| 09.02.04 ಬೆಂಗಳೂರು | ಬಿ.ಕೆ. ಗೋವಿಂದರಾಜು | ತಂದೆ ಕೇಶವಮೇಷ್ಟ್ರು |
| 12.02.04 ಬೆಂಗಳೂರು | ಎಸ್. ಕೃಷ್ಣ | ತಂದೆ ಆರ್. ಕೆ. ಸೂರ್ಯ ನಾರಾಯಣ (ಚಿನ್ನಣ್ಣ) |
| 12.02.04 ಬೆಂಗಳೂರು | ಎಸ್. ರಮೇಶ್ | ತಂದೆ ಆರ್. ಕೆ. ಸೂರ್ಯ ನಾರಾಯಣ (ಚಿನ್ನಣ್ಣ) |
| 14.02.04 ಬೆಂಗಳೂರು | CDR\|\|ಹೆಚ್.ಎಸ್.ಸತ್ಯನಾರಾಯಣ | ತಂದೆ ಸುಬ್ಬಾವಧಾನಿ |
| 14.02.04 ಬೆಂಗಳೂರು | ಹೆಚ್.ಎಸ್.ಸೇತೂರಾಮ್ | ತಂದೆ ಸುಬ್ಬಾವಧಾನಿ |
| 14.02.04 ಬೆಂಗಳೂರು | ಸುಕನ್ಯಾ ಪುರುಷೋತ್ತಮ್ | ತಂದೆ ಸುಬ್ಬಾವಧಾನಿ |
| 15.02.04 ಮುಂಬಯಿ | ನರಸಿಂಹ ಶರ್ಮ ಬಿ.ಎಸ್. | ತಂದೆ ಬಿ.ಎನ್. ಶ್ರೀನಿವಾಸಯ್ಯ |
| 16.02.04 ಬೆಂಗಳೂರು | ಆರ್.ಕೆ. ಪದ್ಮನಾಭ | ತಾಯಿ ಶಾರದಮ್ಮ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 17.02.04 ಮೈಸೂರು | ಶಂಕರ ಆರ್, ಶಾರದಮ್ಮ, ಸೀತ, ಸಾವಿತ್ರಮ್ಮ | ತಾಯಿ ಪುಟ್ಟಲಕ್ಷಮ್ಮ |
| 20.02.04 ಬೆಂಗಳೂರು | ಹೆಚ್.ಎಸ್. ಪ್ರಭಾಕರ್ | ಮಾವ ಸೀತಾರಾಮರಾವ್ |
| 22.02.04 ಬೆಂಗಳೂರು | ರುಕ್ಮಿಣಿ ಎನ್.ರಾವ್ | ಅತ್ತೆ ಸೀತಮ್ಮ ರಾಮಚಂದ್ರ |
| 22.02.04 ಬೆಂಗಳೂರು | ಬಿ.ಆರ್. ಗುರುಪ್ರಸಾದ್ | ತಂದೆ ಬಿ.ಟಿ. ರಾಜು |
| 26.02.04 ಮುಂಬಯಿ | ಆರ್.ವಿ. ಕೃಷ್ಣಮೂರ್ತಿ | ಮಾವ ಸಾಲಿಗ್ರಾಮ ಕೋಟೆ ಸುಬ್ಬಯ್ಯ |
| 28.02.04 ಮೈಸೂರು | ಬಿ.ಎನ್. ನರಸಿಂಹಮೂರ್ತಿ | ಬಸವಾಪಟ್ಟನಾಲೆಬೀದಿ ನರಸಿಂಹಯ್ಯ, ಸುಬ್ಬಲಕ್ಷಮ್ಮ |
| 28.02.04 ಯು.ಎಸ್.ಎ. | ಕೇಶವ್ ಮತ್ತು ನಳಿನಿ - -ಸುಂದರೇಶ್ | ತಾಯಿ ಸಾವಿತ್ರಮ್ಮ |
| 29.02.04 ಮಂಡ್ಯ | ಆರ್.ಜಿ. ಶಾಮಣ್ಣ | ತಂದೆ ಆರ್. ಗಂಗಾಧರಯ್ಯ |
| 08.02.04 ಯು.ಎಸ್.ಎ. | ರಾಮಚಂದ್ರ ಮತ್ತು ವೈದೇಹಿ ಶಿವಶಂಕರ್ | ರಾಮ ಶಿವಶಂಕರ್ |
| 19.12.03 ಬೆಂಗಳೂರು | ಸಾವಿತ್ರಿ ವಿಶ್ವನಾಥ | ಅನುಜ ಎಸ್. ಶ್ರೀನಿವಾಸ್ |
| 28.12.03 ಬೆಂಗಳೂರು | ಸಾವಿತ್ರಿ ವಿಶ್ವನಾಥ | ಪಿರಿಯಾಪಟ್ಟಣದ ಪುಟ್ಟಮ್ಮ |

# ಆಪತ್ಕಾಲ ಪರಿಹಾರ ನಿಧಿ
# (Distress Relief Fund)

ಅಮೇರಿಕದಲ್ಲಿರುವ ಸಂಕೇತಿ ಮಹನೀಯರುಗಳು ಶ್ರೀ ಬಿ.ಕೆ.ಎಸ್. ಸ್ವಾಮಿಯವರ ನೇತೃತ್ವದಲ್ಲಿ ಉಭಯ ಸಂಕೇತಿಗಳ (ಕೌಶಿಕ ಮತ್ತು ಬೆಟ್ಟದಪುರ) ಅನುಕೂಲಕ್ಕಾಗಿ ಆಪತ್ಕಾಲ ಪರಿಹಾರ ನಿಧಿಯನ್ನು ಸ್ಥಾಪಿಸಿ, ಈ ವರ್ಷಕ್ಕಾಗಿ ಸುಮಾರು 50,000/- ರೂ.ಗಳನ್ನು ಕಳುಹಿಸಿದ್ದಾರೆ.

ಹೆಸರೇ ಸೂಚಿಸುವಂತೆ, ಈ ನಿಧಿಯ ಉದ್ದೇಶ ಆಪತ್ಕಾಲದಲ್ಲಿದ್ದು ಮುಖ್ಯವಾಗಿ ಅನಾರೋಗ್ಯದಿಂದ ನರಳುತ್ತಿರುವ, ಅನುಕೂಲತೆಗಳಿಲ್ಲದಿರುವ ಸಂಕೇತಿ ಬಂಧುಗಳಿಗೆ ಧನ ಸಹಾಯ ಮಾಡುವುದು. ಯಾರೊಬ್ಬರಿಗೆ 10,000/- ರೂ.ಗಳಿಗಿಂತ ಹೆಚ್ಚು ಧನ ಸಹಾಯ ಮಾಡಲಾಗುವುದಿಲ್ಲ.

ಇದರ ಉಪಯೋಗವನ್ನು ಪಡೆಯ ಬಯಸುವವರು ಆಯಾ ಸಂಘದ ಕಾರ್ಯದರ್ಶಿಯವರಿಗೆ, ಪೂರ್ಣ ಮಾಹಿತಿ ಕೊಟ್ಟು, ಇಬ್ಬರು ಸಂಕೇತಿ ಗಣ್ಯರುಗಳಿಂದ ಶಿಫಾರಸ್ಸು ಮಾಡಿಸಿ, ಅರ್ಜಿಯನ್ನು ಕಳುಹಿಸಬೇಕು. ಎರಡೂ ಸಂಘಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಸಭೆ ಸೇರಿ, ಬಂದ ಅರ್ಜಿಗಳ ಬಗ್ಗೆ ಅಂತಿಮ ನಿರ್ಧಾರವನ್ನು ತೆಗೆದುಕೊಂಡು ಸೂಕ್ತ ಧನ ಸಹಾಯವನ್ನು ಮಾಡಲಾಗುತ್ತದೆ.

| | |
|---|---|
| **ಆರ್.ಎಸ್. ಭಾಸ್ಕರ ಅವಧಾನಿ** | **ಸಿ. ಕೆ. ಮಂಜುನಾಥ,** |
| ಕಾರ್ಯದರ್ಶಿ | ಪ್ರಧಾನ ಕಾರ್ಯದರ್ಶಿ |
| ಬೆಟ್ಟದಪುರ ಸಂಕೇತಿ ಸಂಘ | ಕೌಶಿಕ ಸಂಕೇತಿ ಸಂಘ |





# ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ 'ಸಂಕೇತಿ ವಾರ್ತಾ'ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

**ರೂ. 5,000/- ಕೊಡುಗೆ ನೀಡುವವರು**
**ಮಹಾಪೋಷಕರು**

**ರೂ. 1,000/- ಕೊಡುಗೆ ನೀಡುವವರು**
**ಪೋಷಕರು**

ದಾನಿಗಳ ಹೆಸರುಗಳನ್ನು ಪ್ರತಿ ತಿಂಗಳೂ 'ವಾರ್ತಾ'ದಲ್ಲಿ ಪ್ರಕಟಿಸಲಾಗುವುದು.

ನಮ್ಮ ಕರೆಗೆ ಓಗೊಟ್ಟು ಈ ತಿಂಗಳು ಸ್ಪಂದಿಸಿದ ಮಾನ್ಯ ಬಾಂಧವರು

| | |
|---|---|
| **ಎಸ್. ಎನ್. ಅನಂತಶ್ರೀನಿವಾಸ** | ಮಹಾಪೋಷಕರು |
| **ಹೆಚ್. ವಿ. ಮಲ್ಲಿಕಾರ್ಜುನ** | ಪೋಷಕರು |
| **ಎಸ್. ಆರ್. ರಾಮಚಂದ್ರ** | ಪೋಷಕರು |

## ನಗರದಲ್ಲೊಂದು ನೂತನ ವಿದ್ಯಾರ್ಥಿನಿಯರ ಹಾಸ್ಟೆಲ್

ಹಲವಾರು ಉದಾತ್ತ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಅನುಷ್ಠಾನಗೊಳಿಸಿಕೊಂಡು ಬರುತ್ತಿರುವ ಜ್ಯೋತಿ ಚಾರಿಟಬಲ್ ಟ್ರಸ್ಟ್ ಇದೀಗ ವ್ಯಾಸಂಗಾಪೇಕ್ಷಿ ಯುವತಿಯರ ಅನುಕೂಲಕ್ಕಾಗಿ ಬೆಂಗಳೂರಿನ ಕನಕಪುರ ರಸ್ತೆಯ ಯಲಚೇನಹಳ್ಳಿಯಲ್ಲಿ (ಜ್ಯೋತಿ ಕೇಂದ್ರೀಯ ವಿದ್ಯಾಲಯದ ಹತ್ತಿರವೇ) ವಿದ್ಯಾರ್ಥಿ ನಿಲಯವನ್ನು ನಿರ್ಮಿಸಿದೆ. 50 ವಿದ್ಯಾರ್ಥಿನಿಯರಿಗೆ ಸ್ಥಳಾವಕಾಶವಿರುವ ಈ ವಿದ್ಯಾರ್ಥಿ ನಿಲಯದಲ್ಲಿ ಪ್ರೀ ಯೂನಿವರ್ಸಿಟಿ, ಡಿಗ್ರಿ / ಡಿಪ್ಲೋಮಾ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಪ್ರವೇಶಾವಕಾಶವಿದೆ. ಸಂಕೇತಿ ವಿದ್ಯಾರ್ಥಿನಿಯರಿಗೆ ವಿಶೇಷ ಆದ್ಯತೆಯೂ ಇದೆ. 2004-2005ನೇ ವ್ಯಾಸಂಗ ವರ್ಷ (Academic Year) ದಿಂದ ಪ್ರವೇಶವನ್ನು ಪ್ರಾರಂಭಿಸಲಾಗುವುದು. ಆಸಕ್ತ ವಿದ್ಯಾರ್ಥಿನಿಯರು ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ, ಅಧ್ಯಕ್ಷರು, ಜ್ಯೋತಿ ಚಾರಿಟಬಲ್ ಟ್ರಸ್ಟ್, ನಂ. 31, ಪಂಪಮಹಾಕವಿ ರಸ್ತೆ, ಬೆಂಗಳೂರು - 560 004 (ದೂರವಾಣಿ ಸಂಖ್ಯೆ 26679697) ಅವರನ್ನು ಸಂಪರ್ಕಿಸಿ ಹೆಚ್ಚಿನ ವಿವರಗಳನ್ನು ಪಡೆಯಬಹುದು.

## Change of Address

| R. N. Somashekar<br>Pushpa | R. Sathyanarayana<br>Jalaja |
|---|---|
| 'Ittina Sowparnika'<br>Flat No. L-405,<br>Kaikondanahalli,<br>Sarjapur Road,<br>Carmel Ram P.O.<br>Bangalore - 35<br>Ph : 37302705 | 'Samartha', No. 655,<br>3rd Block, 3rd Cross,<br>3rd Phase, BSK 3rd Stage,<br>K.G. Layout,<br>Bangalore - 85<br>Ph : 26795870 |





## ನಿಮ್ಮ ಮಾತು

ಜನವರಿ ಸಂಚಿಕೆಯಲ್ಲಿ ಬಂದ ಅಜಯ್‌ದಂಡೇಕರ್ ಅವರ ವಿಮರ್ಶೆ (The constitution & language politics of India : Wg Cdr BVR Rao) ಚೆನ್ನಾಗಿತ್ತು. ನಮ್ಮ ದೇಶದಲ್ಲಿ ಭಾಷೆಗಳ ಸಮಸ್ಯೆ ಇಂದು ನೆನ್ನೆಯದಲ್ಲ. ದಾಯಾದಿಗಳ ಜಗಳದಂತೆಯೇ ಇದೂ ಒಂದು! ಆದರೆ ಅಶೋಕ ಚಕ್ರವರ್ತಿಗೆ ಇದು ಸಮಸ್ಯೆಯೇ ಆಗಿರಲಿಲ್ಲ. ಅವನು ಎಲ್ಲಾ ಭಾಷೆಗಳನ್ನೂ ಕಲಿತಿದ್ದ ಒಬ್ಬೊಬ್ಬರನ್ನು ಇಟ್ಟುಕೊಂಡು ಪಾಳೆಯಗಾರರ ಸಹಾಯದಿಂದ ಯಶಸ್ವಿಯಾಗಿ ಆಡಳಿತ ನಡೆಸಿದ್ದ. ನಮ್ಮ ದೇಶದಲ್ಲಿ ಹುಟ್ಟಿದ ಆಚಾರ್ಯರು, ಸ್ವಾಮಿಗಳು, ಜನಪದ ಕವಿಗಳು, ಶರಣರು, ಜಂಗಮರು, ದಾಸರು, ಸಾಧುಗಳು, ಸನ್ಯಾಸಿಗಳು ತಮ್ಮ ಮಾತೃ ಭಾಷೆಗಳಲ್ಲಿಯೇ ತಾವು ಕಂಡುಕೊಂಡ ಮೌಲ್ಯಗಳನ್ನು ಕಾವ್ಯ ರೂಪದಲ್ಲಿ ಹೇಳುತ್ತಲೇ ಬಂದಿದ್ದಾರೆ. ಅವುಗಳನ್ನು ಅರ್ಥಮಾಡಿಕೊಳ್ಳಲು ಅವರ ಭಾಷೆಗಳು ನಮ್ಮೆಲ್ಲರಿಗೂ ಗೊತ್ತಿರಬೇಕಾಗುತ್ತದೆ. ಭಾಷೆ ಎಂದರೆ ಸಂಪರ್ಕ ಮಾಧ್ಯಮವೆಂದೇ ಅನೇಕರ ಭಾವನೆ. ಆದರೆ ಅದಷ್ಟೇ ಅಲ್ಲದೆ ಆ ಜನರ ಜೀವನ ಕ್ರಮ, ಮಾನವೀಯ ಮೌಲ್ಯಗಳ ಪ್ರತಿಬಿಂಬವಾಗಿರುತ್ತದೆ. 22 ಭಾಷೆಗಳನ್ನು ಕಂಡ ಇಂಗ್ಲೀಷರು ಭಾರತೀಯರನ್ನು ಅನಾಗರೀಕರೆಂದು ಕರೆದರು. ಜರ್ಮನ್ನರು "India is the mother of culture" ಎಂದು ಭಾವಿಸಿದರು. ಅವರ ದೇಶದ ವಿಶ್ವ ವಿದ್ಯಾನಿಲಯಗಳಲ್ಲಿ ನಮ್ಮ ಭಾಷೆಗಳನ್ನು ಅರ್ಥಮಾಡಿಕೊಳ್ಳಲು ಪ್ರತ್ಯೇಕ ವಿಭಾಗಗಳನ್ನೇ ತೆರೆದರು ! ಸ್ನೇಹ-ವಿಶ್ವಾಸಗಳ ರಭಸದಲ್ಲಿ ಯಾವ ಭಾಷೆಯೂ ಸಮಸ್ಯೆಯೇ ಆಗುವುದಿಲ್ಲ ಎನ್ನುವ ತೀರ್ಮಾನ ಅವರದು. ಅಂತಹ ತೀರ್ಮಾನ ತೆಗೆದುಕೊಳ್ಳಲು ನಮಗೆ ಸಾಧ್ಯವೇ ಇಲ್ಲ!

1956ರಲ್ಲಿ ಪೊಟ್ಟಿಶ್ರೀರಾಮುಲು ಪ್ರತ್ಯೇಕ ತೆಲುಗು ರಾಜ್ಯಕ್ಕೆ ಉಪವಾಸ ಕುಳಿತು ಸತ್ತುಹೋದಾಗ ಪ್ರಧಾನಿ ಪಂಡಿತ್ ಜವಹರಲಾಲ್ ನೆಹರೂ ಅವರಿಗೆ ದಿಗಿಲಾಯಿತು. ಭಾಷೆಗಳ ಆಧಾರದ ಮೇಲೆ ರಾಜ್ಯಗಳನ್ನು ನಿರ್ಮಿಸುವ ಯೋಜನೆಗೆ ಕೈ ಹಾಕಿದರು. ಆಗ ಮುಸ್ಲಿಮರಿಗೆ ತಮಗೂ ಒಂದು ಉರ್ದೂ ರಾಜ್ಯ ಬೇಕೆಂದು ಸುದ್ದಿ ಬಂದಾಗ ನೆಹರೂಗೆ ಇನ್ನೂ ದಿಗಿಲಾಯಿತು. ನೆಹರೂ 'ಹಣೆಬರಹ' ಚೆನ್ನಾಗಿತ್ತು. ಈ ವಾದವನ್ನು ಎಲ್ಲಾ ಮುಸ್ಲಿಮರೂ ಒಪ್ಪಲಿಲ್ಲ. ಕೇರಳದ ಮುಸ್ಲಿಮರು ಮಲೆಯಾಳವನ್ನೂ, ತಮಿಳು ಮುಸ್ಲಿಮರು ತಮಿಳನ್ನೂ, ಬಂಗಾಳದ ಮುಸ್ಲಿಮರು ಬಂಗಾಳಿಯನ್ನೂ ಮಾತನಾಡುತ್ತಿದ್ದುದರಿಂದ ''ಉರ್ದೂ ಚಳುವಳಿ'' ತಣ್ಣಗಾಯಿತು.

ಆ ಭಾಷೆಗಳ ಸಮಸ್ಯೆಗಳು ಶುರುವಾಗಿರುವುದು ನಾಗರೀಕರಿಂದಲೇ! ಸ್ವಲ್ಪ ಹೆಚ್ಚು ಓದಿದ/ಸ್ವಲ್ಪ ಹೆಚ್ಚು ಹಣ ಸಂಪಾದನೆ ಮಾಡಿದ ವಿದ್ಯಾವಂತರು/ ಶ್ರೀಮಂತರು ಭಾರತೀಯ ಭಾಷೆಗಳನ್ನು ''ಲೋಕಲ್ ಭಾಷೆಗಳು'' ಎಂದು ತಿರಸ್ಕರಿಸಿದ್ದಾರೆ. ಈ ಭಾವನೆ ಸರಿಯಲ್ಲ ಎಂದು ಹೇಳಲು ಈಗ ವಿದೇಶೀಯರೇ ಬರಬೇಕಾಗಿದೆ.

ನಮ್ಮ ತಾಯಿ ನಮಗೆ ಹೆಚ್ಚೇ ಆಗಿರುತ್ತಾರೆ. ಹಾಗೆಯೇ ಮಾತೃ ಭಾಷೆಯೂ ಸಹ. ಅದು ರಾಜಕೀಯ ಮಾಡುವ ವಸ್ತುವೇನೂ ಅಲ್ಲ.

**- ಬಿ.ಎಸ್. ಸತೀಶ್**

Change of Phone Number

**S. N. Vijaya Kumar**
**Vasundhara**
**57623424**





## ಮಲ್ಲಿಕಾರ್ಜುನ ಸೇವಾ ಸತ್ಸಂಗ

ಈ ಸತ್ಸಂಗದ ಆಶ್ರಯದಲ್ಲಿ ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ಸ್ವಾಮಿಗೆ ಬ್ರಹ್ಮ ರಥೋತ್ಸವದ ಪ್ರಯುಕ್ತ ತಾ|| 09.02.04 (ತೆಪ್ಪೋತ್ಸವದಂದು) ಸಂಕಲ್ಪಪೂರ್ವಕವಾಗಿ, ಸೇವಾಕರ್ತರ ಪರವಾಗಿ ಶಾಲ್ಯಾನ್ನ- ಅಭಿಷೇಕವನ್ನು ನೆರವೇರಿಸಲಾಯಿತು. ಇದೇ ಸಂದರ್ಭದಲ್ಲಿ ಬೆಟ್ಟದಪುರ ಸಂಕೇತಿ ಸಂಘದ ವತಿಯಿಂದ ಬ್ರಾಹ್ಮಣ ಸಂತರ್ಪಣೆ ಕೂಡ ನಡೆಯಿತು. ಸಂತರ್ಪಣೆ ಸಮಯದಲ್ಲಿ ಶಾಲ್ಯಾನ್ನ ಪ್ರಸಾದವನ್ನು ವಿತರಿಸಲಾಯಿತು.


## M/s. Darshanika Foundations (R)

**For Rehabilitation of Physically Handicapped and promotion of Rural Development Programmes.**

***Regd. Office :*** No. 83/2, "Arihant", K. R. Road, Opp. V. V. Puram Science College, Shankarapura, Bangalore - 560 004. Ph : 080 - 26609491

Donations accepted from Rs. 500/- to Rs. 25,000/- under different heads. Donations may be made through D.D./Pay Order drawn in favour of "Darshanika Foundation", payable at Bangalore.

**Donors will be honoured by Honorarium.**

For details contact :
**H. K. Satyaprakash**
Social Worker
**Ph : 9886334667**

# ಪ್ರತಿಭೆ



**M. S. Nagesha**

Born on 23/11/1964 he is a graduate in Civil Engineering from Malnad College of Engineering, Hassan. He passed out with a first class in 1985. He obtained his M.Tech degree in Geotechnical Engineering from IIT Bombay in 1992. He was awarded a doctorate in Civil Engineering (Ph.D) in 2001 from IIT Bombay. The subject of research leading to Ph.D was "Application of Genetic Algorithm and neural network approaches for slope stability analysis". He has presented six technical papers in leading national seminars and technical magazines. He is well versed in application of various highly advanced computer software in civil engineering.

After graduation he worked in Karnataka Irrigation Department for $1^{1}/_{2}$ year and later as a lecturer in KES College of Engineering Raigadh for 3 years. After obtaining M.Tech degree he worked in Shah and Anchor Kuttchi Engineering College, Mumbai as Asst. Professor for 9 years. At present he is working as a Professor of Civil Engineering in the same college after securing Ph.D since 2001, in the scale of Professor fixed by Govt. of India.

He has a brilliant academic background and excellent career and has reached a high social status at a young





age. He was born to Veda Bramha Sri Subramanya Avadhani and late Smt. Susheelamma of Madapura, near Ramanathapura, Hassan Dist. and is married to Mridula (M.A. [Economics] Inspector Central Excise and Customs), Mumbai, who is daughter of Sri H.S. Prabhakara, Chief Engineer (Civil) (Retd.) Department of Telecom, Govt. of India and Smt. Vijayalakshmi of Bangalore. He is blessed with a daughter Chi. N. Roopali (8 Yrs) and Chi. N. Srirakshit ($1^{1}/_{2}$ Yrs.)

Though highly qualified, he is the personification of humility. He exhibits multidisciplinary interests by learning Vedabhyasa, Scriptures from his father and keen interest in Yoga and philosophical, spiritual and religious activities.



**Mythili**

Born on 26/01/1970 she is a graduate in arts from MES College, Bangalore in 1989 where she secured a First Class. She went on to secure a Master of Arts in Hindi from Bangalore University securing 4 gold medals in 1993. Recently she was awarded a Doctorate in Hindi (Ph.D) from Bangalore University in 2003. The subject of her thesis for Ph.D was "Hindi Sant Sahitya Mein Gurunanak ka Sthan". The subject allocated being difficult and abstract it needed extensive research and hard work for seven years.

Immediately after obtaining her Masters degree, she started working as a lecturer in Shree Bhagwan Mahaveer

Jain College (SBMJC), Bangalore. She pioneered a website for the benefit of Sankethis all over the world. Sankethi.com is now being maintained and managed by a group of volunteers. She has determination and perseverance, which was evident when she secured her Ph.D through her marriage and motherhood. She is the daughter of Sri H. S. Prabhakara, Chief Engineer (Civil) (Retd.) Department of Telecom, Govt. of India and Smt. Vijayalakshmi and is married to Sri Prakash N. Rao, B.Sc (Technology), MBA, Manager, ABB Bangalore, son of Sri R. G. Nagaraja Rao and Smt. Savithramma of Mumbai. She is blessed with a son Chi. Amogh P. Rao ($2^1/_2$ Yrs.).

*With Best Compliments from :*

**MEGHAN COMPUTERS**

**We Bring you the knowledge of computers**
**Golden Opportunities for Housewives and Students**

| | | | |
|---|---|---|---|
| 1. | Foremost Step to Computers (Fundas, Windows, Word, Excel, Power Point) | 2 Months | Rs. 800 |
| 2. | Diploma in Tally (Fundas, Windows, Tally 6.3) | 3 Months | Rs. 1800 |
| 3. | Tally 6.3 | 2 Months | Rs. 1500 |
| 4. | Programming in C (Includes Data structures, Binary Trees) | 4 Months | Rs. 2000 |
| 5. | Programming in C ++ (Pre-requisite Knowledge of C) | 1 Month | Rs. 2500 |

***For further details contact :* Nagashree Madhukar**
# 2443, 9th Main, (Opp. to Suchitra Film Society), BSK 2nd Stage, Bangalore - 560 070. **Ph : 26760481 / 31818614**





## ರುದ್ರಪಟ್ಟಣದಲ್ಲಿ ಸಂಗೀತೋತ್ಸವ

| | | |
|---|---|---|
| 22.05.04 ಶನಿವಾರ | ಬೆಳಿಗ್ಗೆ 7 ಗಂಟೆಗೆ | ಕಾವೇರಿ ಪೂಜೆ, ಬಾಗಣ, ಕುಪ್ಪಸ ಸೀರೆಗಳ ಅರ್ಪಣೆ. ಶ್ರೀ ಪ್ರಸನ್ನ ರಾಮೇಶ್ವರ, ಪ್ರಸನ್ನ ಆಂಜನೇಯ, ಚೆನ್ನಕೇಶವ ಸ್ವಾಮಿ ದರ್ಶನ ಪೂಜೆ. |
| | ಬೆಳಿಗ್ಗೆ 10.30ಕ್ಕೆ | ಉದ್ಘಾಟನೆ ಮಾನ್ಯ ಶ್ರೀ ವೈ. ವಿ. ಸುಬ್ರಹ್ಮಣ್ಯರವರಿಂದ |
| | 11-1.30ರವರೆಗೆ | ಶ್ರೀಮತಿ ಎಂ.ಎಸ್. ಶೀಲ ರವರಿಂದ ಹಾಡುಗಾರಿಕೆ |
| | ಸಂಜೆ 4.30ಕ್ಕೆ | ರಂಗೋಲಿ ಸ್ಪರ್ಧೆ, ವೀಕ್ಷಣೆ, ಕೋಲಾಟ (ಗ್ರಾಮದವರಿಂದ) |
| | 6 ರಿಂದ 7.45ವರೆಗೆ | ಕಾವೇರಿಯಲ್ಲಿ ದೀಪೋತ್ಸವ ಮತ್ತು ತೆಪ್ಪೋತ್ಸವ (ಶ್ರೀರಾಮ ಮತ್ತು ಶ್ರೀ ಚನ್ನಕೇಶವ ಸ್ವಾಮಿ) |
| | 8 ರಿಂದ 10.30ವರೆಗೆ | ಮೈಸೂರು ನಾಗರಾಜ್, ಮೈಸೂರು ಮಂಜುನಾಥ್ ರವರಿಂದ ಪಿಟೀಲುದ್ವಯ. |
| | ರಾತ್ರಿ 11.45-1.45 | ಕುಮಾರಿ ಮಾನಸಿ ಪ್ರಸಾದ್ ರವರಿಂದ ಹಾಡುಗಾರಿಕೆ (ವಿಶೇಷವಾಗಿ ಅವಧಾನ ಪಲ್ಲವಿ ನಿರೂಪಣೆ) |
| 23.05.04 ಭಾನುವಾರ | ಬೆಳಿಗ್ಗೆ 8.30 ಗಂಟೆಗೆ | ಶ್ರೀ ಪಟ್ಟಾಭಿರಾಮ ದೇವರ ರಥೋತ್ಸವ |
| | 10.15-12.45ವರೆಗೆ | ಚಂದನ್‌ಕುಮಾರ್ ರವರಿಂದ ಕೊಳಲು |
| | 1.00-2.00ವರೆಗೆ | ಗೋಷ್ಠಿ ಗಾಯನ, ವಿದ್ವಾನ್ ಆರ್. ಕೆ. ಪದ್ಮನಾಭ ಜೊತೆ. |
| | ಸಂಜೆ 4-6.30ವರೆಗೆ | ಸ್ಥಳೀಯ ಹಾಗೂ ಆಹ್ವಾನಿತ ಕಲಾವಿದರಿಂದ ಸಂಗೀತ ಸೇವೆ. |
| | 6.45 ರಿಂದ 8.45ವರೆಗೆ | ಕುಮಾರ ಕಾರ್ತಿಕ್ ಹೆಬ್ಬಾರ್ - ಹಾಡುಗಾರಿಕೆ |
| | 9 ರಿಂದ 11.15ವರೆಗೆ | ಶ್ರೀಮತಿ ಬಿ. ಜಯಶ್ರೀ ರವರಿಂದ ನಾಟಕ - ಸಂಗೀತ ಒಂದು ವಿಶೇಷ ಕಾರ್ಯಕ್ರಮ. (ದಿ॥ ಗುಬ್ಬಿ ವೀರಣ್ಣರವರ ಮೊಮ್ಮಗಳು) |
| | ರಾತ್ರಿ 12 ಗಂಟೆಗೆ | ಮಂಗಳ. |

**ಕಾರ್ಯಕ್ರಮಕ್ಕೆ ಪ್ರತಿನಿಧಿ ಶುಲ್ಕ ರೂ. 150/-. ಕಾರ್ಯಕ್ರಮದಲ್ಲಿ ಭಾಗವಹಿಸುವವರು ಮುಂಗಡವಾಗಿ ಕೆಳಕಂಡವರಿಗೆ ತಿಳಿಸಬೇಕಾಗಿ ವಿನಂತಿ.**

**ಶ್ರೀಮತಿ ಆರ್. ಕೆ. ಗೀತಾಮಣಿ - 26695657**
**ಶ್ರೀ ಆರ್. ಎಲ್. ಮಂಜುನಾಥ - 26520938**

# ಬೆಂಗಳೂರು ಸಂಕೇತಿ ಮಹಿಳಾ ಸಮಾಜ



ಪ್ರತಿ ಎರಡು ವರ್ಷಕ್ಕೊಮ್ಮೆ ಜನವರಿ ತಿಂಗಳನ್ನು ವಿಶೇಷವಾಗಿ ಆಹ್ವಾನಿಸುವ ಪರಿಪಾಠವನ್ನು ಬೆಂಗಳೂರು ಸಂಕೇತಿ ಮಹಿಳಾ ಸಮಾಜ ಇಟ್ಟುಕೊಂಡಿದೆ. ಈ ವರ್ಷವೂ ಜನವರಿ 11ರಂದು ರಂಜನಮೇಳವನ್ನು ಹಮ್ಮಿಕೊಳ್ಳುವುದರ ಮೂಲಕ 2004ನ್ನು ಬರಮಾಡಿಕೊಂಡಿತು.

ಬೆಳಿಗ್ಗೆ 8ರಿಂದಲೇ ಬಸವನಗುಡಿಯ ಶಂಕರಪುರಂನಲ್ಲಿರುವ ವಿದ್ಯಾ ವಿಹಾರದಲ್ಲಿ ಸಡಗರ, ಸಂಭ್ರಮ. ಮಳಿಗೆಗಳನ್ನು ಕಾದಿರಿಸಿದ್ದವರೆಲ್ಲ ಅವರವರ ಮಳಿಗೆಗಳನ್ನು ಜೋಡಿಸಿಕೊಳ್ಳುವಲ್ಲಿ ತೊಡಗಿದ್ದರೆ, ಸಮಿತಿಯ ಸದಸ್ಯೆಯರಲ್ಲಿ ಕೆಲವರು ಮಳಿಗೆಗಳನ್ನು ನೀಡುವಲ್ಲಿ, ಪ್ರವೇಶ ಚೀಟಿ ನೀಡುವಲ್ಲಿ, ದೋಸೆ, ಕಾಫಿ ಚೀಟಿಗಳನ್ನು ಕೊಡುವಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

10 ಗಂಟೆಗೆ ಸರಿಯಾಗಿ ಉದ್ಘಾಟನಾ ಸಮಾರಂಭವು ಶ್ರೀಮತಿಯರಾದ ವೀಣಾ ಶಿವಕುಮಾರ್, ವೀಣಾಪಾಣಿ, ವೀಣಾ ಕಪಾಲೇಶ್ವರ್ ಮತ್ತು ರೂಪ ಅವರುಗಳ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಎಲ್ಲರನ್ನೂ ಆದರದಿಂದ ಬರಮಾಡಿಕೊಂಡವರು ಶ್ರೀಮತಿ ರತ್ನ. ಅಂದಿನ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶ್ರೀಮತಿ ಪದ್ಮಾ ಶೇಷಾದ್ರಿ, ಅಧ್ಯಕ್ಷತೆ ವಹಿಸಿದ್ದ ಕೇಂದ್ರ ಸಮಿತಿಯ ಅಧ್ಯಕ್ಷ ಶ್ರೀ ಎಂ. ನರಸಿಂಹನ್ ಮತ್ತು ಸಮಾಜದ ಅಧ್ಯಕ್ಷೆ ಶ್ರೀಮತಿ ಲಲಿತಮ್ಮ ಕಾಲಭೈರವನ್ ಅವರುಗಳ ಜೊತೆಗೆ ಮತ್ತಿತರರೂ ಕೂಡಿ ದೀಪ ಬೆಳಗುವುದರ ಮೂಲಕ ರಂಜನ ಮೇಳವನ್ನು ಉದ್ಘಾಟಿಸಿದರು.

''ಕೇವಲ ದುಡ್ಡು ಮಾಡುವುದಷ್ಟೇ ರಂಜನ ಮೇಳದ ಉದ್ದೇಶವಲ್ಲ, ಅನೇಕ





ಜನರ ಪ್ರತಿಭೆಗಳನ್ನು ಸಮಾಜಕ್ಕೆ ಪರಿಚಯಿಸಿ, ಮುಂದೆ ಅವರ ವ್ಯಾಪಾರಕ್ಕೆ ಒಂದು ಅನುಕೂಲ ಮಾಡಿಕೊಡುವುದು ಅತಿ ಮುಖ್ಯವಾದ ಉದ್ದೇಶ. ಈ ರೀತಿಯ ಅನುಕೂಲವು ಅನೇಕರಿಗೆ ದೊರೆತಿದೆ ಎಂಬುದು ಹೆಮ್ಮೆಯ ವಿಷಯ. ಮತ್ತೆ ಈ ಮೇಳದಿಂದ ಬರುವ ಸ್ವಲ್ಪಮಟ್ಟಿನ ಆದಾಯವನ್ನು ಸಮಾಜದಲ್ಲಿರುವ ಬೇರೆ ಬೇರೆ ಸಂಸ್ಥೆಗಳ ಒಳಿತಿಗಾಗಿ ವಿನಿಯೋಗಿಸುತ್ತೇವೆ'' ಎಂದು ಸಂಘದ ಕಾರ್ಯದರ್ಶಿ ಶ್ರೀಮತಿ ಆರ್. ಕೆ. ಗೀತಾಮಣಿಯವರು ಮೇಳದ ಉದ್ದೇಶವನ್ನು ವಿವರಿಸಿದರು.

ನಂತರ ಮುಖ್ಯ ಅತಿಥಿಗಳಾಗಿ ಬಂದಿದ್ದ ಶ್ರೀಮತಿ ಪದ್ಮ ಶೇಷಾದ್ರಿಯವರು ''ಮೇಳದ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಯಾರೇ ಆಗಲಿ ಪ್ರತಿದಿನ ಅಡುಗೆಗೆ ಬೇಕಾಗುವ ಪುಡಿಗಳನ್ನು ಒಳ್ಳೆಯ ಗುಣಮಟ್ಟದಲ್ಲಿ ಒದಗಿಸುವುದಾದರೆ, ಅದನ್ನು ಮಾರಾಟ ಮಾಡಿಸಲು ತಾವು ಸಹಾಯ ಮಾಡುವುದಾಗಿಯೂ ಮತ್ತು ತಾವು ಅಧ್ಯಕ್ಷೆಯಾಗಿ ಕೆಲಸ ಮಾಡುತ್ತಿರುವ ಶ್ರೀಮಾತಾ ಕೋ-ಆಪರೇಟೀವ್ ಬ್ಯಾಂಕ್‌ನ ಸಹಾಯವನ್ನು ಯಾರು ಅಗತ್ಯವೋ ಅವರು ಉಪಯೋಗಿಸಿಕೊಳ್ಳಿ'' ಎಂದು ಹೇಳಿದರು.

''ಬೆಂಗಳೂರು ಸಂಕೇತಿ ಮಹಿಳಾ ಸಮಾಜವು ತನ್ನ 6ನೇ ರಂಜನ ಮೇಳದತ್ತ ತನ್ನ ದೃಢವಾದ ಹೆಜ್ಜೆಯನ್ನಿಟ್ಟಿದೆ. ಇದು ಶ್ಲಾಘನೀಯವಾದ ವಿಷಯ. ಈ ಮೇಳವು ಕೇವಲ ಬೆಂಗಳೂರಿಗೆ ಮಾತ್ರ ಸೀಮಿತವಾಗದೆ, ಮೈಸೂರಿನಲ್ಲೂ ನಡೆಯಲಿ. ಅಲ್ಲಿ ನಮ್ಮದೇ ಆದ ಕಲ್ಯಾಣ ಮಂಟಪವನ್ನು ಇದಕ್ಕಾಗಿ ಉಪಯೋಗಿಸಿಕೊಳ್ಳಬಹುದು'' ಎಂದು ಕೇಂದ್ರ ಸಮಿತಿಯ ಅಧ್ಯಕ್ಷರಾದ ಶ್ರೀ ಎಂ. ನರಸಿಂಹನ್ ಅವರು ಕರೆ ನೀಡಿದರು.

ವಂದನಾರ್ಪಣೆಯ ಕೆಲಸವನ್ನು ಶ್ರೀಮತಿ ಮಾಲತಿ ವೈದ್ಯನಾಥ್‌ರವರು ಮಾಡಿದರು ಮತ್ತು ಇದಿಷ್ಟೂ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ವಸುಂಧರಾ ನಿರ್ವಹಿಸಿದರು.

ಇದ್ದಷ್ಟೂ ಜಾಗದಲ್ಲಿ ಮಳಿಗೆಗಳು ತುಂಬಿದ್ದವು. ಮನೆಯಲ್ಲಿಯೇ ತಯಾರಿಸಿದ ಬಿಸ್ಕತ್ತು, ಕುಟ್ಟವಲಕ್ಕಿ, ಅವರೆಕಾಳು-ಹುರಿಗಾಳು, ರವೆ ಇಡ್ಲಿ, ಸೋರೆಕಾಯಿ ಇಡ್ಲಿ, ಮಸಾಲೆ ದೋಸೆ, ಕ್ಯಾರೆಟ್ ಹಲ್ವ, ಹೀರೇಕಾಯಿ ದೋಸೆ ಹೀಗೆ ಎಲ್ಲಾ ಬಗೆಯ ತಿಂಡಿ ತಿನಿಸುಗಳು, ಹಪ್ಪಳ, ಸಂಡಿಗೆ, ಬಗೆಬಗೆಯ ಬಟ್ಟೆ-ಬರೆಗಳು, Painted Pots ಹೀಗೇ

ಎಲ್ಲಾ ರೀತಿಯ ಕಲಾ ವಸ್ತುಗಳು, ಅನೇಕ ಬಗೆಯ ಆಟದ ಮಳಿಗೆಗಳು, ಒಟ್ಟಿನಲ್ಲಿ ಎಲ್ಲಾ ರೀತಿಯ ಮಳಿಗೆಗಳೂ ಬಂದಿದ್ದವು. ಎಲ್ಲಾ ಮಳಿಗೆಗಳ ಮುಂದೆಯೂ ಜನವೋ ಜನ.

ಇವಿಷ್ಟೇ ಅಲ್ಲದೆ ಉಚಿತ ವೈದ್ಯಕೀಯ ಸಲಹೆಯನ್ನೂ ಕೂಡ ಆಯೋಜಿಸಲಾಗಿತ್ತು. ಉಚಿತ ಸಲಹೆಗಳನ್ನು ನೀಡಲು ಡಾ|| ಚಂದ್ರಶೇಖರ್ ಮತ್ತು ಡಾ|| ಆರ್. ಎನ್. ವಿಶ್ವೇಶ್ವರ ಅವರುಗಳು ದೊಡ್ಡ ಮನಸ್ಸು ಮಾಡಿ ಆಗಮಿಸಿದ್ದರು. ಸಾಕಷ್ಟು ಜನರು ಇದರ ಉಪಯೋಗಗಳನ್ನು ಪಡೆದುಕೊಂಡರು.

ನಮ್ಮ ಹಿಂದಿನವರು ರೂಢಿಸಿಕೊಂಡಿದ್ದಂತಹ ಆರತಿ-ತಟ್ಟೆ ಕಲೆ ಇಂದು ಕಣ್ಮರೆಯಾಗುತ್ತಿದೆ. ಅದನ್ನು ಪುನಶ್ಚೇತನಗೊಳಿಸುವ ಉದ್ದೇಶದಿಂದ ''ಧಾನ್ಯಗಳಿಂದ ಅಲಂಕರಿಸಿದ ಆರತಿ ತಟ್ಟೆ ಸ್ಪರ್ಧೆ'' ಯನ್ನು ಏರ್ಪಡಿಸಲಾಗಿತ್ತು. ಇದರಲ್ಲಿ 82 ಜನರು ಭಾಗವಹಿಸಿದ್ದರು. ಇದಕ್ಕೆ ಒಟ್ಟು 12 ಬಹುಮಾನಗಳನ್ನು ಇಡಲಾಗಿತ್ತು.

ಸಂಜೆ 4 ಗಂಟೆಯ ವೇಳೆಗೆ 'Raffle Ticket Draw' ಇತ್ತು. ಯಾರು ಯಾವ ಬಹುಮಾನಗಳನ್ನು ಪ್ರಾಯೋಜಿಸಿದ್ದರೋ, ಅವರೇ ಆ ಬಹುಮಾನವನ್ನು ಡ್ರಾ ಮಾಡಿದರು. ಪ್ರಥಮ ಬಹುಮಾನ ಒಂದನ್ನುಳಿದು, ಮಿಕ್ಕ ಎಲ್ಲಾ ಬಹುಮಾನಗಳನ್ನೂ ನಮ್ಮ ಸದಸ್ಯೆಯರೇ ಪ್ರಾಯೋಜಿಸಿದ್ದರು ಎಂಬುದು ಹೆಮ್ಮೆಯ ವಿಷಯ.

ಹಾಗೆಯೇ ಈ ನಮ್ಮ ರಂಜನ ಮೇಳಕ್ಕೆ ಹಲವಾರು ಜನರು ಸಹಾಯಹಸ್ತ ನೀಡಿದ್ದರು. 1000 ರೂ ಮತ್ತು ಅದಕ್ಕೂ ಮೇಲ್ಪಟ್ಟು ಸಹಾಯ ಮಾಡಿದವರಿಗೆಲ್ಲಾ ನೆನಪಿನ ಕಾಣಿಕೆಗಳನ್ನು ನೀಡಲಾಯಿತು. ಅಂತೆಯೇ ಮೇಳದ Pamphlets ಮತ್ತು ಆಹ್ವಾನ ಪತ್ರಿಕೆಗಳನ್ನು ಪ್ರಾಯೋಜಿಸಿದ್ದ ಶ್ರೀ ಶಂಕರ್ ಹೆಗ್ಡೆ ಅವರಿಗೆ, ವೈದ್ಯಕೀಯ ಸಲಹೆಗಳನ್ನು ನೀಡಿದ ವೈದ್ಯರಿಗೆ, ಆರತಿ ತಟ್ಟೆ ಸ್ಪರ್ಧೆಗೆ ತೀರ್ಪು ನೀಡಿದ ತೀರ್ಪುಗಾರರಿಗೆ ಎಲ್ಲರಿಗೂ ನೆನಪಿನ ಕಾಣಿಕೆಗಳನ್ನು ನೀಡಿ ಗೌರವಿಸಲಾಯಿತು.

ಒಟ್ಟಿನಲ್ಲಿ ಬೆಳಗಿನಿಂದ ಸಂಜೆವರೆಗಿನ Housie, ಪ್ರತಿ ನೂರು ಪ್ರವೇಶಕ್ಕೊಮ್ಮೆ ಬಹುಮಾನ ಮತ್ತು ಸತತವಾಗಿ ಮೈಕ್‌ನಲ್ಲಿ ಬರುತ್ತಿದ್ದ ಮಾತುಗಳು, ಮಳಿಗೆಗಳ ಬಗ್ಗೆ ವಿವರಗಳು ಇವೆಲ್ಲವುಗಳಿಂದ ರಂಜನ ಮೇಳವು ರಂಜನೀಯವಾಗಿತ್ತು.

ಕೊನೆಯದಾಗಿ ಸಂಜೆ 5.30ಕ್ಕೆ 'ಅದೃಷ್ಟ ಮಳಿಗೆ' ಡ್ರಾ ಇತ್ತು. ಇದರ ಬಹುಮಾನಗಳನ್ನು ಶ್ರೀ ಬಿ.ಕೆ. ಸತ್ಯನಾರಾಯಣ ಅವರು ಪ್ರಾಯೋಜಿಸಿದ್ದರು. ಹಾಗಾಗಿ





ಅವರೇ 'ಅದೃಷ್ಟ ಮಳಿಗೆ' ಗಳನ್ನು ಡ್ರಾ ಮಾಡಿದರು. ತಿಂಡಿ-ತಿನಿಸುಗಳಿಗೆಲ್ಲಾ ಒಂದು ಮತ್ತು ಉಳಿದ ಮಳಿಗೆಗಳಿಗೆ ಒಂದು. ಒಟ್ಟು 2 ಬಹುಮಾನಗಳನ್ನು ಪ್ರಾಯೋಜಕರೇ ಡ್ರಾ ಮಾಡಿ, ಅವರೇ ಬಹುಮಾನ ನೀಡಿದರು.

ನಮ್ಮ ಮೇಳವನ್ನು ಸಂದರ್ಶಿಸಿದವರು ಸುಮಾರು ಮೂರು ಸಾವಿರದಿಂದ ಮೂರುವರೆ ಸಾವಿರ ಜನರು.

ಈ ರಂಜನ ಮೇಳದಿಂದ ಸಂಘವು ಹೆಚ್ಚಿನ ಆದಾಯವನ್ನೇ ಪಡೆದಿದೆ. ಇಷ್ಟು ಆದಾಯವನ್ನು ಪಡೆಯಲು ಸಹಕರಿಸಿದ ಎಲ್ಲಾ ಆತ್ಮೀಯ ಬಾಂಧವರಿಗೂ ಸಂಘವು ಆಭಾರಿಯಾಗಿದೆ. ತಮ್ಮೆಲ್ಲರ ಪ್ರೀತಿ-ವಿಶ್ವಾಸ ಇಂತೆಯೇ ಮುಂದುವರಿಯಲಿ ಎಂದು ಆಶಿಸುತ್ತದೆ.

★★★

ತಾ|| 31.01.04 ರಂದು ಬೆಳಿಗ್ಗೆ 11.30ಕ್ಕೆ ಆದರ್ಶ ವನಿತಾ ಸಮಾಜದಲ್ಲಿ ಶ್ರೀಮತಿ ಪದ್ಮಾವತಿಯವರಿಂದ ವಜ್ರಗಳ ಬಗ್ಗೆ ಮಾಹಿತಿಯನ್ನೂ, ಸಂಘವು ಆಯೋಜಿಸಿತ್ತು. ಅಂದಿನ ಆತಿಥೇಯರುಗಳು ಶ್ರೀಮತಿಯರಾದ ವಸಂತ, ಲಲಿತ, ರಾಧಾ, ಕಮಲಮ್ಮ, ಸರಸ್ವತಿ ಮತ್ತು ಮೀನಾಕ್ಷಿ ಅವರುಗಳು.

ರಂಜನ ಮೇಳದಿಂದ ಹೆಚ್ಚು ಆದಾಯ ಪಡೆದಿರುವುದನ್ನು ತಿಳಿದು ಎಲ್ಲಾ ಸದಸ್ಯೆಯರೂ ಅತಿಯಾದ ಸಂತೋಷ ಪಟ್ಟರು. ಇದೇ ಸಂತಸದ ಸಂದರ್ಭದಲ್ಲಿ ಎಲ್ಲರಿಗೂ ಸಿಹಿ ಹಂಚಲಾಯಿತು. ಮತ್ತೆ ನಮ್ಮ ಹಿರಿಯ ಸದಸ್ಯೆಯರು, ಕಿರಿಯರ ಕ್ರಿಯಾಶೀಲತೆ ಮತ್ತು ಕಾರ್ಯವೈಖರಿ, ಹೊಂದಾಣಿಕೆ ಇವುಗಳನ್ನೆಲ್ಲಾ ಮೆಚ್ಚಿ ಕಿರಿಯರಿಗೆಲ್ಲಾ ನೆನಪಿನ ಕಾಣಿಕೆಗಳನ್ನಿತ್ತು, ಅವುಗಳನ್ನು ಸ್ವೀಕರಿಸುವ ಆ ಕ್ಷಣ ಎಂದೆಂದೂ ನೆನಪಿನಲ್ಲಿ ಉಳಿಯುವಂತೆ ಮಾಡಿದರು. ಇದೊಂದು ಹೆಗ್ಗಳಿಕೆಯ ವಿಷಯ.

**ರು. ಕೃ. ಗೀತಾಮಣಿ** (26695657)
ಗೌ|| ಕಾರ್ಯದರ್ಶಿ

## ಬೆಟ್ಟದಪುರ ಸಂಕೇತಿ ಸಂಘ, ಮೈಸೂರು ಶಾಖೆ

# ತ್ಯಾಗರಾಜರ ಆರಾಧನಾ ಕಾರ್ಯಕ್ರಮದ ವರದಿ

ದಿನಾಂಕ 22.02.04 ಭಾನುವಾರ ಸಂಘದ ಸಭಾಂಗಣದಲ್ಲಿ ಬೆಳಿಗ್ಗೆ 9.00 ಗಂಟೆಗೆ ಶ್ರೀ ಆರ್. ಜಯರಾಂರವರ ನೇತೃತ್ವದಲ್ಲಿ ಪೂಜಾ ಕಾರ್ಯಕ್ರಮವು ನಡೆಯಿತು. 10.00 ಗಂಟೆಗೆ ಶ್ರೀಮತಿ ಗಾಯತ್ರಿ ಆರ್. ಹರವೆಯವರಿಂದ ಉಪನ್ಯಾಸ ಕಾರ್ಯಕ್ರಮ ನಡೆಯಿತು. 10.30ಕ್ಕೆ ವಿದುಷಿಯರಾದ ಡಾ|| ಆರ್.ಎನ್. ಶ್ರೀಲತಾ ಹಾಗೂ ಸುಮಾರು 15 ಜನರ ವೃಂದದವರಿಂದ ಸುಶ್ರಾವ್ಯವಾದ ಸಮೂಹ ಗೋಷ್ಠಿ ಗಾಯನ, ಶ್ರೀ ತ್ಯಾಗರಾಜರ ಪಂಚರತ್ನ ಕೃತಿಗಳ ಹಾಡುಗಾರಿಕೆ ನಡೆಯಿತು. 12.00 ಗಂಟೆಯಿಂದ ಮಧ್ಯಾಹ್ನ2.00 ಗಂಟೆಯವರೆಗೆ ವಿದ್ವಾನ್ ಶ್ರೀ ಮುರಳಿ ವೃಂದದವರಿಂದ ಸುಶ್ರಾವ್ಯವಾದ ಗಾಯನ ಕಛೇರಿಯು ನಡೆಯಿತು. ಸುಮಾರು 250 ಜನ ಪ್ರೇಕ್ಷಕರು ಸಂಗೀತದ ಸವಿಯನ್ನು ಅನುಭವಿಸಿದರು.

ಸಂಗೀತ ಕಾರ್ಯಕ್ರಮದ ನಂತರ ಎಲ್ಲರಿಗೂ ಭೋಜನದ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು.

ಈ ಎಲ್ಲಾ ಕಾರ್ಯಕ್ರಮವೂ ಯಶಸ್ವಿಯಾಗಿ ನೆರವೇರಿಸಲು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಶಾಖೆಯ ಕಾರ್ಯಕಾರಿ ಸಮಿತಿಯು ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತದೆ.

**ಎಂ. ಕೆ. ಸುರೇಶ**

# ಸಾಮೂಹಿಕ ಉಪನಯನದ ಕಾರ್ಯಕ್ರಮ

ದಿನಾಂಕ 21.05.2004 ಶುಕ್ರವಾರ ಸಂಘದ ಮೈಸೂರು ಶಾಖೆಯ ಆಶ್ರಯದಲ್ಲಿ ಸಾಮೂಹಿಕ ಉಪನಯನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಂಕೇತಿ ಬಾಂಧವರು ಇದರ ಉಪಯುಕ್ತತೆಯನ್ನು ಹೆಚ್ಚಿನ ರೀತಿಯಲ್ಲಿ ಪಡೆಯಬೇಕೆಂದು ಕೋರಿಕೆ. ವಟುಗಳು ಇದ್ದಲ್ಲಿ **ಏಪ್ರಿಲ್ 30ನೇ** ತಾರೀಖಿನ ಒಳಗಾಗಿ ಶಾಖೆಯ ಅಧ್ಯಕ್ಷರಾದ ಶ್ರೀ **ಹೆಚ್.ಎಸ್. ಶ್ರೀಧರಮೂರ್ತಿ, ಮೈಸೂರು (ದೂರವಾಣಿ : 2545434)** ಅವರನ್ನು ಸಂಪರ್ಕಿಸಿ ಹೆಸರನ್ನು ನೋಂದಾಯಿಸಬೇಕಾಗಿ ವಿನಂತಿ.

**ಎಂ. ಕೆ. ಸುರೇಶ**





## ಬೆಟ್ಟದಪುರ ಸಂಕೇತಿ ಸಂಘ, ಬೆಂಗಳೂರು ಶಾಖೆ

# ತ್ಯಾಗರಾಜರ ಆರಾಧನಾ ಕಾರ್ಯಕ್ರಮದ ವರದಿ

ಭಕ್ತಿಭಾವ ಪೂರ್ಣವಾದ ಶ್ರೀ ಪುರಂದರ, ಶ್ರೀ ತ್ಯಾಗರಾಜ ಆರಾಧನಾ ಮಹೋತ್ಸವವು ಬೆಂಗಳೂರು ಶಾಖೆಯಿಂದ ಮೊದಲ ಬಾರಿಗೆ ದಿನಾಂಕ 22.02.2004 ರಂದು ಶ್ರೀ ಜಯರಾಮ ಸೇವಾ ಮಂಡಲಿಯಲ್ಲಿ ವಿಜೃಂಭಣೆಯಿಂದ ನೆರವೇರಿತು. ವಾಕ್ಚತುರೆ ಶ್ರೀಮತಿ ಆರ್. ಕೆ. ಗೀತಾಮಣಿ ಕಾರ್ಯಕ್ರಮದ ನಿರೂಪಣೆಯ ಜವಾಬ್ದಾರಿ ವಹಿಸಿಕೊಂಡು ಅತ್ಯಂತ ಆತ್ಮೀಯವಾಗಿ ನಡೆಸಿಕೊಟ್ಟರು. ನಮ್ಮ ಸಂಸ್ಕೃತಿಗೆ ಸೂಕ್ತವಾದ ರೀತಿಯಲ್ಲಿ ಶ್ರೀ ಎಸ್. ಸಿ. ಚಂದ್ರಶೇಖರ ಮತ್ತು ಚಿ|| ಚೇತಕ್ ಅವರ ವೇದಘೋಷ ಮತ್ತು ಶ್ರೀಮತಿ ರೋಹಿಣಿ ಶೇಖರರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.

ಶ್ರೀ ಶೇಷಾದ್ರಿಶೇಖರ ಅವರು ಮುಖ್ಯ ಕಲಾವಿದರಾದ ಗಾನಕಲಾ ಭೂಷಣ ಆರ್. ಕೆ. ಪದ್ಮನಾಭ ಮತ್ತು ಭಾಗವಹಿಸಿದ ಎಲ್ಲಾ ಕಲಾವಿದರನ್ನು, ಕೇಂದ್ರ ಸಮಿತಿಯ ಅಧ್ಯಕ್ಷರಾದ ಶ್ರೀ ಎಂ. ನರಸಿಂಹನ್‌ರವರನ್ನು, ಎಲ್ಲಾ ಸಂಕೇತಿ ಬಂಧು ಭಗಿನಿಯರನ್ನು ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಗಾನಕಲಾ ಭೂಷಣ ವಿದ್ವಾನ್ ಆರ್. ಕೆ. ಪದ್ಮನಾಭರವರು ಶ್ರೀ ತ್ಯಾಗರಾಜರ ಪಂಚರತ್ನ ಕೀರ್ತನೆಗಳ ಬಗ್ಗೆ ವಿದ್ವತ್ಪೂರ್ಣವಾದ ಭಾಷಣವನ್ನು ಮಾಡಿದರು. ನಾಟ, ಗೌಳ, ಆರಭಿ, ವರಾಳಿ ಮತ್ತು ಶ್ರೀ ರಾಗಗಳ ಮೂಲ ಭಾವಗಳ ವಿವರಣೆ, ಪಂಚರತ್ನಕೀರ್ತನೆಗಳ ಔಚಿತ್ಯ, ಆಳ, ವಿಸ್ತಾರಗಳ ಬಗ್ಗೆ ಪಾಂಡಿತ್ಯಪೂರ್ಣವಾದ ಉಪನ್ಯಾಸ ಎಲ್ಲರ ಮನಮುಟ್ಟುವಂತೆಯೂ, ಜ್ಞಾನದಾಯಕವಾಗಿಯೂ ಇದ್ದಿತು. ಉಪನ್ಯಾಸದ ನಂತರ ಸಂಗೀತ ತ್ರಿಮೂರ್ತಿಗಳಾದ ಶ್ರೀ ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು, ಶ್ರೀ ಶಾಮಾಶಾಸ್ತ್ರಿಗಳು ಮತ್ತು ಕರ್ನಾಟಕ ಸಂಗೀತದ ಪಿತಾಮಹರೆನಿಸಿದ ಶ್ರೀ ಪುರಂದರ ದಾಸರುಗಳಿಗೆ ಪೂಜಾಕೈಂಕರ್ಯವನ್ನು ಶ್ರೀ ಬಿ.ಎಸ್. ಜಗನ್ನಾಥ್‌ರವರು (ಕೇಂದ್ರ ಸಮಿತಿ ಖಜಾಂಚಿ) ನೆರವೇರಿಸಿದರು.

ಈ ಕಾರ್ಯಕ್ರಮಕ್ಕೆ ಶ್ರೀ ತ್ಯಾಗರಾಜರ ಭಾವಚಿತ್ರದ ಬಗ್ಗೆ ಕೇಳಿದಾಗ ಶ್ರೀ ಆರ್. ಕೆ. ಪದ್ಮನಾಭರವರು ನಮ್ಮ ಸಂಘಕ್ಕೆ ಒಂದು ಉತ್ತಮವಾದ ಭಾವಚಿತ್ರವನ್ನು ತಮ್ಮ ಅಮೂಲ್ಯವಾದ ಕಾಣಿಕೆಯಾಗಿ ದಯಪಾಲಿಸಿರುತ್ತಾರೆ. ಅವರಿಗೆ ನಮ್ಮ ಶಾಖೆಯ ಹೃತ್ಪೂರ್ವಕ ಕೃತಜ್ಞತೆಗಳು. ಇದರ ನಂತರ ಪಂಚರತ್ನ ಕೀರ್ತನೆಗಳ ಗೋಷ್ಠಿ ಗಾಯನ ವಿದ್ವಾನ್ ಶ್ರೀ ಆರ್.ಕೆ. ಪದ್ಮನಾಭರವರ ನೇತೃತ್ವದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ವಿದುಷಿಯರಾದ, ಶ್ರೀಮತಿಯರಾದ, ಸುಶೀಲ ಸುಬ್ಬಣ್ಣ, ಉಮಾ ನಟರಾಜ, ವನಜ ರಾಮಾನುಜಂ, ವತ್ಸಲಾ, ವೇದವತಿ ಸದಾಶಿವ, ಸಂಧ್ಯಾ, ಕು|| ವಿವೇಕ್, ಉಷಾ ಶ್ರೀನಾಥ್, ಶಕುಂತಲಾ, ವೀಣಾ ಎಸ್, ಉಷಾ ಜಯರಾಂ, ಬಾಲಸರಸ್ವತಿ, ಹೆಚ್. ಎಸ್. ಜಯಲಕ್ಷ್ಮಿ, ರತ್ನ ಜಯರಾಂ, ಅಚ್ಯುತ, ರೋಹಿಣಿ ಶೇಖರ, ಕುಮಾರಿ ಭವ್ಯ, ಸರ್ವಶ್ರೀ ಎಸ್.ಸಿ. ಚಂದ್ರಶೇಖರ, ಚಿ|| ಎಸ್.ಎಂ. ಪ್ರಮೋದ, ಅರ್ಜುನ್, ಕೃಷ್ಣಮೂರ್ತಿ, ಸುಂದರಮೂರ್ತಿ ಮುಂತಾದವರು ಭಾಗವಹಿಸಿದರು. ಲಯವಾದ್ಯ ಗಂಭೀರ (ಚಿಕಾಗೊ ಕನ್ನಡ ಕೂಟ) ಶ್ರೀ ಆರ್. ಕೆ. ಪ್ರಸನ್ನಕುಮಾರ ಅವರ ಮೃದಂಗ ವಾದನ ಕಾರ್ಯಕ್ರಮಕ್ಕೆ ಹೆಚ್ಚಿನ ಮೆರುಗನ್ನು ಕೊಟ್ಟಿತು. ಇಲ್ಲಿ ವಿದ್ವಾನ್ ಆರ್. ಕೆ. ಪ್ರಸನ್ನಕುಮಾರರು ಒಬ್ಬ ಉತ್ತಮ ಗಾಯಕರೆಂಬುದನ್ನು ಸ್ಮರಿಸುತ್ತಾ, ಕಾರಣಾಂತರಗಳಿಂದ ಮೃದಂಗ ವಾದನಕ್ಕೆ ಇತರ ಸಂಕೇತಿ ಕಲಾವಿದರು ಆ ದಿನ ಲಭ್ಯವಿಲ್ಲದ ಕಾರಣ ಶ್ರೀ ಪ್ರಸನ್ನ ಕುಮಾರರನ್ನು ಮೃದಂಗ ನುಡಿಸಲು ವಿನಂತಿಸಿಕೊಳ್ಳಲಾಗಿ, ಪಂಚರತ್ನ ಕೀರ್ತನೆಗಳ ಗಾಯನಕ್ಕೆ ಅವರು ಉತ್ಸುಕರಾಗಿದ್ದಾಗ್ಯೂ ನಮ್ಮಗಳ ಪ್ರಾರ್ಥನೆಯ ಮೇರೆಗೆ ಅವರು ಮೃದಂಗ ನುಡಿಸಲು ಒಪ್ಪಿಕೊಂಡದ್ದು ಅವರ ವಿನಯ, ಸಂಘದ ಮೇಲಿನ ಅವರ ಅಭಿಮಾನವನ್ನು ತೋರಿಸುತ್ತದೆ. ಅವರಿಗೆ ಸಂಘವು ಆಭಾರಿಯಾಗಿದೆ. ತಬಲ ಸಹಕಾರವನ್ನು ಶ್ರೀ ಎಸ್.ಎನ್. ನಟರಾಜ್ ನೀಡಿದರು. ಶ್ರೀಮತಿ ಆರ್.ಕೆ. ಗೀತಾಮಣಿಯವರು ಮಾತನಾಡಿ ಬೆಂಗಳೂರು ಶಾಖೆಯಿಂದ ವರ್ಷದಲ್ಲಿ ಹಲವಾರು ವಿಶಿಷ್ಟ ಕಾರ್ಯಕ್ರಮಗಳನ್ನು ಏರ್ಪಡಿಸುವ ಉದ್ದೇಶವಿದ್ದು, ಸಂಕೇತಿ ಬಂಧುಗಳು ಬೇಸರಿಸದೆ ಭಾಗವಹಿಸಿ, ಪ್ರೋತ್ಸಾಹಿಸಬೇಕೆಂದು ವಿನಂತಿಸಿದರು. ಇದರ ನಂತರ ಶಾಖೆಯ ಅಧ್ಯಕ್ಷರಾದ





ಶ್ರೀ ಎಸ್. ಸಿ. ಮಂಜುನಾಥ ರವರು ಮಾತನಾಡಿ, ಈ ಕಾರ್ಯಕ್ರಮದ ಅಂಗವಾಗಿ ಸಂಕೇತಿ ಬಂಧುಗಳ ಮನೆಗಳಿಗೆ ಭೇಟಿ ಕೊಟ್ಟಾಗ, ಸಂಕೇತಿ ಬಂಧುಗಳು ಆದರದಿಂದ ಸ್ವಾಗತಿಸಿ, ಕಾಫಿ, ತಿಂಡಿ ಮುಂತಾದವುಗಳಿಂದ ಸತ್ಕರಿಸಿ, ಜೊತೆಗೆ ಕಾರ್ಯಕ್ರಮಕ್ಕೆ ಧನ ಸಹಾಯವನ್ನು ಮಾಡಿದ ಎಲ್ಲಾ ಸಂಕೇತಿ ಬಂಧುಗಳಿಗೂ, ಶ್ರೀ ಆರ್. ಕೆ. ಪದ್ಮನಾಭ, ಆರ್. ಕೆ. ಪ್ರಸನ್ನಕುಮಾರ ಮುಂತಾದ ಎಲ್ಲಾ ಕಲಾವಿದರಿಗೂ ಈ ಕಾರ್ಯಕ್ರಮಕ್ಕೆ ಕಲಾಭವನವನ್ನು ಯಾವುದೇ ಶುಲ್ಕವಿಲ್ಲದೆ ಕೊಟ್ಟ ಶ್ರೀ ಜಯರಾಮ ಸೇವಾ ಮಂಡಲಿ ಕಾರ್ಯಕರ್ತರಿಗೂ, ಇದಕ್ಕೆ ಕಾರಣಕರ್ತರಾದ ಶ್ರೀ ಜಯರಾಮ ಸೇವಾಮಂಡಲಿಯ ಕಾರ್ಯದರ್ಶಿಗಳಾದ ಶ್ರೀ ಗೋಪಾಲಕೃಷ್ಣರವರಿಗೂ ಮತ್ತು ನಮ್ಮವರೇ ಆದ ಶ್ರೀ ಎಸ್. ಜಿ. ಕೃಷ್ಣಮೂರ್ತಿಗಳಿಗೂ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸಿದರು. ನಂತರ ಕೇಂದ್ರ ಸಮಿತಿ ಅಧ್ಯಕ್ಷರಾದ ಶ್ರೀ ಎಂ. ನರಸಿಂಹನ್‌ರವರು ಶ್ರೀ ಆರ್. ಕೆ. ಪದ್ಮನಾಭರವರಿಗೆ ಪುಷ್ಪಹಾರ ಮತ್ತು ಫಲ ಸಮರ್ಪಣೆಯನ್ನು ಮಾಡಿದರು. ಇದಾದನಂತರ ಎಲ್ಲರೂ ರುಚಿಯಾದ ಪ್ರಸಾದ ಭೋಜನವನ್ನು ಸ್ವೀಕರಿಸಿದರು. ಮಧ್ಯಾಹ್ನ 3.30ರನಂತರ ಸಂಕೇತಿ ಉದಯೋನ್ಮುಖ ಕಲಾವಿದರು ಭಾಗವಹಿಸಿದರು. ಕಾರ್ಯಕ್ರಮವು ಸಾಯಂಕಾಲ 5.30ಕ್ಕೆ ಅಲ್ಪ ಉಪಾಹಾರದೊಂದಿಗೆ ಮುಕ್ತಾಯವಾಯಿತು.

ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣಕರ್ತರಾದ ಎಲ್ಲರಿಗೂ ವಿಶೇಷವಾಗಿ ಕೇಂದ್ರ ಸಮಿತಿ ಅಧ್ಯಕ್ಷರಾದ ಶ್ರೀ ಎಂ. ನರಸಿಂಹನ್‌ರವರಿಗೂ ಮತ್ತು ನಮ್ಮ ಶಾಖೆಯ ಎಲ್ಲಾ ಸದಸ್ಯರಿಗೂ ನನ್ನ ಹೃತ್ಪೂರ್ವಕವಾದ ಅನಂತ ವಂದನೆಗಳನ್ನು ಅರ್ಪಿಸುತ್ತೇನೆ.

**ಎಸ್. ಸಿ. ಮಂಜುನಾಥ**

ಅಧ್ಯಕ್ಷರು

ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ನಿಮ್ಮ ತನು, ಮನ, ಧನ ಸಹಕಾರ ನೀಡಿ. ಸಂಘವನ್ನು ಬೆಳೆಸಿ.

# H. K. SATYAPRAKASH

**Dealer in all types of products like Shirt Length, Pant Length, Pressure Cookers, Bed Spreads, Incense Sticks, Toilet Soaps, Detergents, Fans, Tea, Time Pieces, Talcum Powders, Copper Bottom Vessels, Perfumes, Sarees, Dress Materials, Chudidar Materials, Toothpaste, Family Pack Towel sets, Lungis, Dhotis etc., of good quality available. 15% Discount available on some products.**

*****

**Horoscope - Reading and Palm Reading available.**

No. 146, Raghavendra Block, 15th Main Road, Kalidasa Layout, Near Raghavendra Mutt, Srinagar, Bangalore - 50.

**For details contact :**
**9886334667**
**9844125411**
**9845994578**







*With Best Compliments From :*

# Sri Bhaskar Industries

**# B - 78, Industrial Estate, Rajajinagar, Bangalore - 560 044.**

**Phone : 23350646**

***With Best Compliments From :***

# ROTAMACH INDIA

**C - 20, NGEF, Ancillary Estate**

**Mahadevapura Post, White Field Road Bangalore - 560 048.**

**Phone : (O) 28524226 (R) 26784112**

**Prop. S. N. SHIVA SHANKAR**